ದಿನಾಂಕ : ಡಿಸೆಂಬರ್ 07, 2007

## ವಿದೇಶದಿಂದ ಅಗ್ಗದ– ದರದ ನಿಧಿಯ ಸಂಶಯಾಸ್ಪದ ಕೊಡುಗೆಗಳು

ವಿದೇಶದಿಂದ ಅಗ್ಗದ ಬಡ್ಡಿದರದ ನಿಧಿಯ ಸಂಶಯಾಸ್ಪದ ರವಾನೆ ಕೊಡುಗೆಯ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕು ಸಾರ್ವಜನಿಕರನ್ನು ಎಚ್ಚರಿಸುತ್ತದೆ.

ವಿದೇಶಿ ಸಂಸ್ಥೆಗಳಿಂದ ಭಾರತೀಯ ರಿಸರ್ವ್ ಬ್ಯಾಂಕು/ ಇತರ ಬ್ಯಾಂಕುಗಳಿಗೆ ಸಂದಾಯವಾಗಿದೆಯೆಂದು ಸಾಧಿಸುವ ಅಗ್ಗದ ಬಡ್ಡಿದರದ ವಿದೇಶಿ ಹಣದ ಸಂಶಯಾಸ್ಪದ ಕೊಡುಗೆ ರವಾನೆಯ ಆಮಿಷಕ್ಕೆ ಒಳಗಾಗಬಾರದೆಂದು, ಸಾರ್ವಜನಿಕರು ಅಪರಿಚಿತ ಸಂಸ್ಥೆಗಳ ಯಾವುದೇ ಕೊಡುಗೆ/ ಯೋಜನೆಯಲ್ಲಾಗಲೀ ಭಾಗವಹಿಸಬಾರದೆಂದೂ ಸಾರ್ವಜನಿಕರನ್ನು ಭಾರತೀಯ ರಿಸರ್ವ್‌ಬ್ಯಾಂಕು ಎಚ್ಚರಿಸುತ್ತದೆ.

ಅಂತಹ ಕೊಡುಗೆಗಳ ಕಾರ್ಯವೈಖರಿಯನ್ನು ಕುರಿತು ಭಾರತೀಯ ರಿಸರ್ವ್ ಬ್ಯಾಂಕು ಹೀಗೆ ವಿವರಿಸುತ್ತದೆ: ಕೆಲವು ವಿದೇಶಿ ಸಂಸ್ಥೆಗಳು/ವ್ಯಕ್ತಿಗಳು/ಈ ಸಂಸ್ಥೆಗಳನ್ನು ಪ್ರತಿನಿಧಿಸುತ್ತೇವೆಂದು ಹೇಳಿಕೊಳ್ಳುವ ಕೆಲವು ವ್ಯಕ್ತಿಗಳು, ಸಂಸ್ಥೆಗಳು ಪತ್ರ/ಇ–ಮೇಲ್ ಮುಖಾಂತರ ವ್ಯಕ್ತಿಗಳಿಗೆ/ಸಂಸ್ಥೆ (ಶಾಲೆ/ಆಸ್ಪತ್ರೆ)ಗಳಿಗೆ ದೊಡ್ಡ ಪ್ರಮಾಣದ ಹಣವನ್ನು ನೀಡಿ ಅವರ ವ್ಯಾಪಾರ, ವಹಿವಾಟುಗಳಲ್ಲಿ ನೆರವು ನೀಡುವುದಾಗಿಯೂ ಆಶ್ವಾಸನೆ ನೀಡುತ್ತಾರೆ. ಹೀಗೆ ಒಮ್ಮೆ ಅವರೊಂದಿಗೆ ಬಾಂಧವ್ಯ ಬೆಳೆದಾದ ಮೇಲೆ ಸ್ವಲ್ಪ ಆರಂಭದ ಠೇವಣಿ/ ದಲ್ಲಾಲಿ ರುಸುಮನ್ನು ರವಾನಿಸಿದ ನಂತರ ಕೊಡುಗೆ ಹಣವನ್ನು ವರ್ಗಾಯಿಸುವ ಸಲುವಾಗಿ ಆ ವ್ಯಕ್ತಿಗಳ/ ಭಾರತದಲ್ಲಿನ ಸಂಸ್ಥೆಗಳ ಬ್ಯಾಂಕ್ ಖಾತೆಗಳ ವಿವರಗಳನ್ನು ಕೇಳುತ್ತಾರೆ. ಅದರಂತೆ ವಿದೇಶಿ ಲಾಟರಿಗಳಲ್ಲಿ ಗೆದ್ದ ಬಹುಮಾನ ಮೊತ್ತ ಪಡೆಯುವ ಸಲುವಾಗಿ ದಲ್ಲಾಲಿ ರುಸುಮು /ಶುಲ್ಕವನ್ನು ವಿದೇಶಿ ಮುದ್ರೆಯಲ್ಲಿ ಹಣ ಪಾವತಿಸುವುದಕ್ಕಾಗಿ ಅನುಮತಿ/ಸ್ಪಷ್ಟೀಕರಣ ಕೋರಿ, ವ್ಯಕ್ತಿಗಳು/ಅಧಿಕೃತ ವ್ಯಾಪಾರಿಗಳಿಂದ ಪತ್ರಗಳು ಭಾರತೀಯ ರಿಸರ್ವ್ ಬ್ಯಾಂಕಿಗೆ ಬಂದಿವೆ. ಕೆಲವು ಸಾಗರೋತ್ತರ ಸಂಸ್ಥೆಗಳು ವ್ಯಕ್ತಿಗಳನ್ನು ಸಂಸ್ಥೆಗಳನ್ನು ಟ್ರಸ್ಟ್‌ಗಳನ್ನು ಸಂಪರ್ಕಿಸಿ ದೊಡ್ಡ ಮೊತ್ತದ ಹಣವನ್ನು ಅಗ್ಗದ ಬಡ್ಡಿಗಾಗಿ ನೀಡಲು ರಿಸರ್ವ್ ಬ್ಯಾಂಕಿನ ಖಾತೆಯಲ್ಲಿ ಇಟ್ಟಿರುವುದಾಗಿಯೂ ಮತ್ತು ಅದನ್ನು ಹಂಚುವುದಕ್ಕೆ ರಿಸರ್ವ್ ಬ್ಯಾಂಕಿನ ಅನುಮತಿಗಾಗಿ ಕಾಯುತ್ತಿರುವುದಾಗಿಯೂ ಅವರನ್ನು ನಂಬಿಸುತ್ತಿರುವ ಅಂಶ ರಿಸರ್ವ್ ಬ್ಯಾಂಕಿನ ಗಮನಕ್ಕೆ ಬಂದಿದೆ. ತಮ್ಮ ವಾದವನ್ನು ಸಮರ್ಥಿಸಲು ಭಾರತೀಯ ರಿಸರ್ವ್ ಬ್ಯಾಂಕ್ ನೀಡಿರುವಂತೆ ತೋರುವ ಪ್ರಮಾಣಪತ್ರದ/ ಠೇವಣಿ ರಸೀತಿಗಳ ಪ್ರತಿಗಳನ್ನು ಆ ವಂಚಕರು ಮುಂದಿಡುತ್ತಿದ್ದಾರೆ.

1999ರ ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆಯಡಿ ಲಾಟರಿ ಯೋಜನೆಗೆ ಯಾವುದೇ ರೀತಿಯಲ್ಲಿ ರವಾನೆಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ನಿಷೇಧಿಸಿದೆ ಎಂಬುದನ್ನು ಇಂದು ಸ್ಪಷ್ಟಪಡಿಸುತ್ತದೆ ಹಾಗೂ

ಈ ನಿರ್ಬಂಧಗಳು ವಿವಿಧ ಹೆಸರಿನಲ್ಲಿ ಚಾಲ್ತಿಯಲ್ಲಿರುವ ಹಣಚಲಾವಣೆ, ಉಡುಗೊರೆ, ಪುರಸ್ಕಾರ ಇತ್ಯಾದಿ ಎಲ್ಲ ರೀತಿಯ ಲಾಟರಿಯಂತಹ ಯೋಜನೆಗಳಲ್ಲಿನ ಭಾಗವಹಿಸುವಿಕೆಗೆ ಅನ್ವಯಿಸುತ್ತವೆ ಎಂದು ತಿಳಿಸಬಯಸುತ್ತದೆ. ನಿಧಿ ವಿತರಿಸುವ ಸಲುವಾಗಿ  ಭಾರತೀಯ ರಿಸರ್ವ್ ಬ್ಯಾಂಕು ತನ್ನಲ್ಲಿ ಭಾರತೀಯ ವ್ಯಕ್ತಿಗಳ/ ಕಂಪೆನಿಗಳ/ ಟ್ರಸ್ಟಿನ ಯಾವುದೇ ಖಾತೆಗಳನ್ನು ಹೊಂದಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ಮತ್ತೊಮ್ಮೆ ಸ್ಪಷ್ಟಪಡಿಸುತ್ತದೆ.

**ಜಿ. ರಘುರಾಜ್**
ಉಪ ಮಹಾ ವ್ಯವಸ್ಥಾಪಕರು

**ಪತ್ರಿಕಾ ಪ್ರಕಟಣೆ: 2007–2008/770**